# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 12.08.2011**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಸೇನಾಪಡೆಗೆ ಸೇರಿದ ಎ.ಎಸ್.ಸಿ. ಸೆಂಟರ್ ಮತ್ತು ಕಾಲೇಜು ಆವರಣದಲ್ಲಿ ಇಂದು ಐದು ಸಾವಿರ ಸಸಿ ನೆಡುವ ಕಾರ್ಯಕ್ರಮಕ್ಕೆ ಪಾಲಿಕೆ ಆಯುಕ್ತರಾದ ಶ್ರೀ ಸಿದ್ದಯ್ಯ ರವರು ಚಾಲನೆ ನೀಡಿದರು.

ಎ.ಎಸ್.ಸಿ. ಸೆಂಟರ್ ಮತ್ತು ಕಾಲೇಜು ಆವರಣ 8000 ಎಕರೆ ವಿಶಾಲ ಪ್ರದೇಶವಿದ್ದು, ಇಲ್ಲಿ 25,000 ಕ್ಕೂ ಹೆಚ್ಚು ಸಸಿಗಳನ್ನು ನೆಡಲು ಮತ್ತು ಮಳೆ ನೀರಿನ ಸಂಗ್ರಹಣೆಗೆ ಹೆಚ್ಚಿನ ಅವಕಾಶವಿರುವುದರಿಂದ ಸೇನಾಪಡೆಯ ಸಿಬ್ಬಂದಿಯ ಸಹಯೋಗದೊಂದಿಗೆ ಇವೆರಡು ಪರಿಸರ ಪೂರಕವಾದ ಕಾರ್ಯಗಳನ್ನು ಅನುಷ್ಠಾನಗೊಳಿಸಲಾಗುವುದು ಎಂದು ಆಯುಕ್ತರು ತಿಳಿಸಿದರು. ಪಾಲಿಕೆಯಿಂದ ಈಗಾಗಲೇ ಎಲ್ಲಾ ಉದ್ಯಾನವನ, ಆಟದ ಮೈದಾನ, ಕಛೇರಿ ಕಟ್ಟಡಗಳಲ್ಲಿ ಮಳೆ ನೀರಿನ ಸಂಗ್ರಹಣೆ ಮತ್ತು ಸಸಿ ನೆಡುವ ಕಾರ್ಯ ವ್ಯಾಪಕವಾಗಿ ಹಮ್ಮಿಕೊಂಡಿದೆ. ಈ ವರ್ಷದಲ್ಲಿ ಪಾಲಿಕೆಯಿಂದ 6 ಲಕ್ಷ ಸಸಿ ನೆಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ Lt Gen Kamal Mohey AVSM Commandant ASC Centre and College ರವರು ಮಾತನಾಡಿ, ಬೆಂಗಳೂರು ನಗರವು ಹಸಿರು ಮತ್ತು ಸುಂದರ ನಗರವೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಇದನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಮಿಲಿಟರಿ ಸಿಬ್ಬಂದಿ ಕೂಡಾ ಉತ್ಸುಕರಾಗಿದ್ದಾರೆ. ಮುಂದಿನ ಪೀಳಿಗೆಗೆ ಉತ್ತಮ ಪರಿಸರ ನೀಡುವುದಕ್ಕಾಗಿ ಈ ವಿಶಾಲವಾದ ಆವರಣದಲ್ಲಿ ಹೆಚ್ಚು ಹೆಚ್ಚು ಸಸಿಗಳನ್ನು ನೆಡಲು ಬಿಬಿಎಂಪಿ ಸಹಕಾರ ನೀಡಿದೆ. ಈ ಒಂದು ಉತ್ತಮ ಕಾರ್ಯ ಕೈಗೊಂಡಿದ್ದರಿಂದ ಬಿಬಿಎಂಪಿಗೆ ಅಭಿನಂದನೆ ಸಲ್ಲಿಸಿ ಮಿಲಿಟರಿ ಸಿಬ್ಬಂದಿಯಿಂದಲೂ ಕೂಡಾ ಪೂರ್ಣ ಸಹಕಾರ ಸಿಗಲಿದೆ ಎಂದು ತಿಳಿಸಿದರು.

ಶಾಸಕರಾದ ಶ್ರೀ ಎನ್.ಎ. ಹ್ಯಾರಿಸ್ ರವರು ಮಾತನಾಡಿ, ನಾವೂ ಬದುಕಬೇಕು ಮತ್ತು ಮುಂದಿನ ಜನಾಂಗಕ್ಕೂ ಆರೋಗ್ಯವಂತರಾಗಿ ಬದುಕಲು ಉತ್ತಮ ಪರಿಸರ ಕಾಪಾಡಿಕೊಂಡು ಬರಬೇಕಾದುದು ನಮ್ಮ ಕರ್ತವ್ಯ. ಈಗ ಇಡೀ ಪ್ರಪಂಚವೇ ಪರಿಸರ ಮಾಲಿನ್ಯದಿಂದ ತತ್ತರಿಸುತ್ತಿರುವಾಗ ನಾವು ಪರಿಸರ ರಕ್ಷಣೆಗೆ ಹೆಚ್ಚಿನ ಗಮನಹರಿಸಬೇಕು. ಈ ನಿಟ್ಟಿನಲ್ಲಿ ಬಿಬಿಎಂಪಿ ಕಾರ್ಯೋನ್ಮುಖವಾಗಿದೆ. ನಾನು ಸಂಪೂರ್ಣ ಸಹಕಾರ ನೀಡುತ್ತೇನೆ. ಇವತ್ತು ಸೇನಾಪಡೆಯ ಸಿಬ್ಬಂದಿ / ಅಧಿಕಾರಿಗಳು ಕೈಗೊಂಡ ಕೆಲಸದಿಂದ ನನಗನಿಸುತ್ತಿದೆ ಮುಂಬರುವ ದಿನಗಳಲ್ಲಿ ಖಂಡಿತ ಹೆಚ್ಚು ಹೆಚ್ಚು ಮರಗಳನ್ನು ಬೆಳೆಸಿ ಪರಿಸರ ಕಾಪಾಡೋಣ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ವಾರ್ಡ್ ನಂ.114ರ ಪಾಲಿಕೆ ಸದಸ್ಯರಾದ ಶ್ರೀಮತಿ ಸರಳಾ ಮೋಹನ ರವರು ಹಾಗೂ ಪಾಲಿಕೆಯ ಹಿರಿಯ ಅಧಿಕಾರಿಗಳು ಹಾಜರಿದ್ದರು.

**ಸಾರ್ವಜನಿಕ ಸಂಪರ್ಕಾಧಿಕಾರಿ**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 12.08.2011**

ಮೈಸೂರು ಉದ್ಯಾನಕಲಾ ಸಂಘ, ಲಾಲ್‌ಬಾಗ್ ಮತ್ತು ತೋಟಗಾರಿಕೆ ಇಲಾಖೆ ಸಹಯೋಗದೊಂದಿಗೆ ಆಗಸ್ಟ್-2011ರ ಭಾರತ ಸ್ವಾತಂತ್ರ್ಯೋತ್ಸವ ಅಂಗವಾಗಿ ಲಾಲ್‌ಬಾಗ್ ಗಾಜಿನಮನೆಯಲ್ಲಿ ನಡೆಸಿದ ಫಲಪುಷ್ಪ ಪ್ರದರ್ಶನದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಭಾಗವಹಿಸಿದ ತೋಟಗಾರಿಕೆ ಇಲಾಖೆಯೂ ಎರಡನೇ ಸ್ಥಾನ ಗಳಿಸಿದ್ದು, ದಿನಾಂಕ: 12.08.2011 ರಂದು ಲಾಲ್‌ಬಾಗ್‌ನ ಡಾ|| ಎಂ.ಹೆಚ್. ಮರಿಗೌಡ ಸ್ಮಾರಕ ಭವನದಲ್ಲಿ ಕುಂಡಗಳಲ್ಲಿ ಬೆಳೆದ ಅಲಂಕಾರಿಕ ಗಿಡಗಳಿಗಾಗಿ 48 ಪ್ರಥಮ ಬಹುಮಾನಗಳನ್ನು, ಕುಂಡಗಳಲ್ಲಿ ಬೆಳೆದ ತರಕಾರಿಗಳಿಗಾಗಿ 30 ಪ್ರಥಮ ಬಹುಮಾನಗಳನ್ನು ಪಡೆಯಲಾಗಿರುತ್ತದೆ. ಅಲ್ಲದೆ ಇದರೊಂದಿಗೆ ಮೇಯರ್ ರೋಲಿಂಗ್ ಶೀಲ್ಡ್ ಸೇರಿ ಒಟ್ಟು 11 ರೋಲಿಂಗ್ ಶೀಲ್ಡ್‌ಗಳನ್ನು ಲಾಲ್‌ಬಾಗ್‌ಗೆ ಪಡೆಯಲಾಗಿರುತ್ತದೆ.

ಇದರೊಂದಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಒಟ್ಟು 07 ವಲಯದ ತೋಟಗಾರಿಕೆ ಇಲಾಖೆಯೂ ಆಯಾ ವಲಯದಲ್ಲಿ ನಿರ್ವಹಣೆ ಮಾಡಿರುವ ಅಲಂಕಾರಿಕ ಉದ್ಯಾನವನಕ್ಕೆ ಬಹುಮಾನಗಳನ್ನು ಪಡೆಯಲಾಗಿರುತ್ತದೆ ಎಂದು ತೋಟಗಾರಿಕೆ ಅಧೀಕ್ಷಕರು (ದಕ್ಷಿಣ) ರವರು ತಿಳಿಸಿದ್ದಾರೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**